ಉ) ಕಾನೂನು ಉಲ್ಲಂಘನೆ ಶಿಕ್ಷಾರ್ಹ ಅಪರಾಧವಲ್ಲವೇ? ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಮದ್ಯದಂಗಡಿಗೆ ಸನ್ನದುಗಳನ್ನು ಕರ್ನಾಟಕ ಅಬಕಾರಿ ಅಧಿನಿಯಮ 1965ರ ಅಡಿಯಲ್ಲಿ ರಚಿತವಾದ ನಿಯಮಗಳ ಪ್ರಕಾರ ನೀಡಲಾಗುತ್ತಿದೆ.

ಆ) ಇಲ್ಲ

ಇ) ಕರ್ನಾಟಕ ಅಬಕಾರಿ (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ಪ್ರಕಾರ ಯಾವುದೇ ಆಕ್ಷೇಪಣಾ ಸ್ಥಳಗಳಾದ 100 ಮೀಟರ್ಸ್ ಒಳಗೆ ಮತ್ತು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಮದ್ಯದಿಂದ 220 ಮೀಟರ್ಸ್ ಮದ್ಯ ಮಾರಾಟದ ಸನ್ನದುಗಳನ್ನು ನೀಡಲಾಗುವುದಿಲ್ಲ ಆದರೆ ಸಿಟಿ ಮುನಿಸಿಪಾಲಿಟಿ ಅಥವಾ ಸಿಟಿ ಕಾರ್ಪೊರೇಷನ್ ಮಿತಿಯಲ್ಲಿ ಮದ್ಯ ಮಾರಾಟದ ಅಂಗಡಿಯು ಯಾವುದೇ ಆಕ್ಷೇಪಣಾ ಸ್ಥಳಗಳಿಂದ 50 ಮೀಟರ್ ಮೇಲ್ಪಟ್ಟು 100 ಮೀಟರ್ ಒಳಗೆ ಇದ್ದಲ್ಲಿ ಅಂತಹಾ ಅಂಗಡಿಗಳಿಗೆ ಅಬಕಾರಿ ಆಯುಕ್ತರ ಪೂರ್ವಾನುಮತಿಯೊಂದಿಗೆ ಸನ್ನದು ಮಂಜೂರು ಮಾಡಬಹುದಾಗಿದೆ.

ಈ) - ಇಲ್ಲ - ಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಉ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಅಗ್ನಿಶಾಮಕ ದಳದವರಿಂದ ಪರವಾನಿಗೆ ಪಡೆದ ಸಂಸ್ಥೆಗಳು

2633 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ 1995ರ ಜನವರಿಯಿಂದ ಜುಲೈ 1995ರವರೆಗೆ ಎಷ್ಟು ಹೋಟೆಲ್‌ಗಳು, ಸಿನಿಮಾಮಂದಿರಗಳು, ಸರ್ಕಸ್ ಹಾಗೂ ಇತರ ಸಂಸ್ಥೆಗಳು, ಅಪಾರ್ಟ್‌ಮೆಂಟ್ಸ್‌ಗಳು ಪೆಟ್ರೋಲ್ ಬಂಕ್ ಹಾಗೂ ಸೀಮೆಎಣ್ಣೆ ಅಂಗಡಿಗಳಿಗೆ ಅಗ್ನಿಶಾಮಕ ದಳದ ಪರವಾನಗಿ ನೀಡಲಾಗಿದೆ?

ಆ) ಈ ಪರವಾನಗಿಗಳನ್ನು ನೀಡಲು ಹೊಂದಿರುವ ಅಧಿಕಾರಿಗಳಾರು?

ಇ) ಈ ಪರವಾನಗಿ ನೀಡುವುದಕ್ಕೆ ಮೊದಲು ಸ್ಥಳ:ಪರೀಕ್ಷೆ ಮಾಡಲಾಗಿದೆಯೇ?

ಈ) ಈ ಪರವಾನಗಿ ನೀಡುವ ಅಧಿಕಾರವನ್ನು ಸರ್ಕಾರದ ಗೃಹ ಕಾರ್ಯದರ್ಶಿಯವರಿಗೆ ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು) :

ಅ) 1) ಬಹುಮಹಡಿ ಹೋಟೆಲ್ ನಿರ್ಮಿಸಲು - ಇಲ್ಲ

2) ಬಹುಮಹಡಿ ವಸತಿ ಗೃಹಗಳ ನಿರ್ಮಾಣಕ್ಕೆ - 11

3) ಬಹುಮಹಡಿ ವಾಣಿಜ್ಯ ಸಂಕೀರ್ಣ ಹಾಗೂ ಇತರ ಕಟ್ಟಡಗಳ ನಿರ್ಮಾಣ - 7

4) ಪೆಟ್ರೋಲ್ : ಡೀಸೆಲ್ ಬಂಕ್ - 11

5) ಸೀಮೆಎಣ್ಣೆ ದಾಸ್ತಾನು - 3

6)	ಸರ್ಕಸ್ ಪ್ರದರ್ಶನ	-	1
7)	ವಸ್ತು ಪ್ರದರ್ಶನಗಳು	-	9
8)	ಎಲ್.ಪಿ.ಜಿ. ದಾಸ್ತಾನುಗಳು	-	6
9)	ಸಿನಿಮಾ ಮಂದಿರಗಳು	-	44
10)	ಮನೋರಂಜನೆ ಕಾರ್ಯಕ್ರಮಗಳು	-	2

ಆ) ಅಗ್ನಿಶಾಮಕ ಸೇವೆಗಳು ನಿರ್ದೇಶಕರು ಬಹುಮಹಡಿ ಹೋಟೆಲ್ ಕಟ್ಟಡಗಳು, ಬಹುಮಹಡಿ ವಾಣಿಜ್ಯ ಸಂಕೀರ್ಣ ಕಟ್ಟಡಗಳು ಹಾಗೂ ವಸತಿ ಗೃಹಗಳು, ಪೆಟ್ರೋಲ್ :ಡೀಸೆಲ್ ಬಂಕ್‌ಗಳು, ಸೀಮೆಎಣ್ಣೆ ದಾಸ್ತಾನು, ಸರ್ಕಸ್ ಹಾಗೂ ದೊಡ್ಡ ವಸ್ತು ಪ್ರದರ್ಶನಗಳು ಎಲ್.ಪಿ.ಜಿ. ದಾಸ್ತಾನು - ಇವುಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಮತ್ತು ಇತರೆ ಸಲಹಾ ಪತ್ರಗಳನ್ನು ನೀಡುವ ಪ್ರಾಧಿಕಾರಿಗಳಾಗಿರುತ್ತಾರೆ. ಸಂಬಂಧಪಟ್ಟ ಅಗ್ನಿಶಾಮಕ ವಿಭಾಗಾಧಿಕಾರಿಗಳು ಮತ್ತು ಠಾಣಾಧಿಕಾರಿಗಳು ಸಿನಿಮಾ ಮಂದಿರ ಮತ್ತು ಮನೋರಂಜನಾ ಕಾರ್ಯಕ್ರಮಗಳಿಗೆ ನಿರಾಕ್ಷೇಪಣಾ ಪತ್ರ ನೀಡುವ ಪ್ರಾಧಿಕಾರಿಗಳಾಗಿರುತ್ತಾರೆ.

ಇ) ಹೌದು. ಸ್ಥಳ ಪರೀಕ್ಷೆ ಮಾಡಿ ತಾಂತ್ರಿಕವಾಗಿ ಸೂಕ್ತವೆಂದು ಕಂಡು ಬಂದ ನಂತರವೇ ಪರವಾನಗಿ ನೀಡಲಾಗುತ್ತಿದೆ.

ಈ) ಇಲ್ಲ

ಬನ್ನಿಪೇಟೆ ಕ್ಷೇತ್ರದ ಬಡಾವಣೆಗಳು

2521- ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬನ್ನಿಪೇಟೆ ವಿಧಾನಸಭಾ ಕ್ಷೇತ್ರದಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳೆಷ್ಟು?

ಆ) ಇವುಗಳಿಗೆ ಡಾಂಬರು ಹಾಗೂ ಇತರ ದುರಸ್ತಿ ಕೆಲಸಗಳನ್ನು 1994-95 ರಲ್ಲಿ ಕೈಗೊಳ್ಳಲಾಗಿದೆಯೇ?

ಇ) 1995-96ರಲ್ಲಿ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಿಗೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ನಿಗಧಿ ಪಡಿಸಿರುವ ಹಣದ ಪ್ರಮಾಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಬನ್ನಿಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾಧಿಕಾರದ ಡಾ|| ಅಂಬೇಡ್ಕರ್ ಹೆಸರಿನ ಒಂದು ಬಡಾವಣೆ ಮಾತ್ರ ಇರುತ್ತದೆ.

ಆ) 1994-95ನೇ ಸಾಲಿನಲ್ಲಿ ರಸ್ತೆಗೆ ಜಲ್ಲಿ ಹಾಕುವ ಕೆಲಸಗಳನ್ನು ಮಾಡಲಾಗಿದೆ.

ಇ) ರೂ. 4.74 ಲಕ್ಷಗಳನ್ನು ಅಭಿವೃದ್ಧಿ ಕಾಮಗಾರಿಗಳಿಗಾಗಿ 1995-96ನೇ ಸಾಲಿನಲ್ಲಿ ಒದಗಿಸಲಾಗಿದೆ.

ಶೇಫ್ಗಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆಯಲ್ಲಿ ವಯೋಮಿತಿ ಮೀರುತ್ತಿರುವವರಿಗೆ ಶೇಕಡ 50-50 ಮೀಸಲಾತಿ

2407 - ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?